ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1551
ಸದಸ್ಯರ ಹೆಸರು	ಶ್ರೀ ನಸೀರ್ ಅಹ್ಮದ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	18-03-2021
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

ಕ್ರಸ	ಪ್ರಶ್ನೆ	ಉತ್ತರ
(ಅ).	ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 2008 ರಿಂದ ಇಂದಿನವರೆಗೆ ಎಷ್ಟು ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಲೋಕಾಯುಕ್ತ ಟ್ರಾಪ್‌ಗೆ ಒಳಪಟ್ಟು ವಿಶೇಷ ನ್ಯಾಯಾಲಯಗಳಲ್ಲಿ ಶಿಕ್ಷೆಗೆ ಗುರಿಯಾಗಿದ್ದಾರೆ: ಅಂತಹ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಹೆಸರು, ಹುದ್ದೆಯ ವಿವರ ಜಿಲ್ಲಾವಾರು ಒದಗಿಸುವುದು;	ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 2008 ರಿಂದ ಇಂದಿನವರೆಗೆ ಲೋಕಾಯುಕ್ತ ಟ್ರ್ಯಾಪ್‌ಗೆ ಒಳಗಾಗಿ ವಿಶೇಷ ನ್ಯಾಯಾಲಯದಲ್ಲಿ ಆರು ಅಧಿಕಾರಿಗಳು ಮತ್ತು ಆರು ಸಿಬ್ಬಂದಿ ಶಿಕ್ಷೆಗೊಳಗಾಗಿದ್ದಾರೆ. ಅವರುಗಳ ಹೆಸರು, ಹುದ್ದೆ, ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
(ಆ)	ಲೋಕಾಯುಕ್ತ ಟ್ರಾಪ್‌ಗೆ ಒಳಪಟ್ಟು ವಿಶೇಷ ನ್ಯಾಯಾಲಯಗಳಿಂದ ಶಿಕ್ಷೆಗೊಳಪಟ್ಟು ಎಷ್ಟು ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ಸೇವೆಯಿಂದ ವಜಾ ಮಾಡಲಾಗಿದೆ: ಅಂತಹ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಹೆಸರು, ಹುದ್ದೆಯ ವಿವರ ಜಿಲ್ಲಾವಾರು ಒದಗಿಸುವುದು;	ಲೋಕಾಯುಕ್ತ ಟ್ರ್ಯಾಪ್‌ಗೆ ಒಳಪಟ್ಟು ವಿಶೇಷ ನ್ಯಾಯಾಲಯಗಳಿಂದ ಶಿಕ್ಷೆಗೊಳಗಾಗಿ ಸರ್ಕಾರಿ ಸೇವೆಯಿಂದ ವಜಾಗೊಳಿಸಿರುವ ಅಧಿಕಾರಿ/ಸಿಬ್ಬಂದಿಗಳ ಹೆಸರು, ಹುದ್ದೆ ಜಿಲ್ಲಾವಾರು ವಿವರಗಳು: ಕ್ರ.ಸ. / ಅಧಿಕಾರಿ/ಸಿಬ್ಬಂದಿ ಹೆಸರು, ಹುದ್ದೆ / ಜಿಲ್ಲಾವಾರು 01 / ಶ್ರೀ ಹೆಚ್.ಪಿ. ವೆಂಕಟೇಶ್, ವಾಣಿಜ್ಯ ತೆರಿಗೆ ಅಧಿಕಾರಿ / ಬೆಂಗಳೂರು ನಗರ 02 / ಎಂ.ಎಂ. ಗಣೇಶಪ್ಪ, ವಾಣಿಜ್ಯ ತೆರಿಗೆ ಪರಿವೀಕ್ಷಕರು, / ಬೆಂಗಳೂರು ನಗರ
(ಇ)	ವಿಶೇಷ ನ್ಯಾಯಾಲಯಗಳಿಂದ ಶಿಕ್ಷೆಗೆ ಗುರಿಯಾದ ಎಷ್ಟು ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿ ಜಾಮೀನು ಪಡೆದು ಸೇವೆಯಲ್ಲಿ ಮುಂದುವರೆದಿದ್ದಾರೆ: ಅಂತಹ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಹೆಸರು, ಹುದ್ದೆಯ ವಿವರ ಜಿಲ್ಲಾವಾರು ಒದಗಿಸುವುದು;	ವಿಶೇಷ ನ್ಯಾಯಾಲಯಗಳಿಂದ ಶಿಕ್ಷೆಗೆ ಗುರಿಯಾದ ಅಧಿಕಾರಿ/ಸಿಬ್ಬಂದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿ ಜಾಮೀನು ಪಡೆದು ಸೇವೆಯಲ್ಲಿ ಮುಂದುವರೆದಿರುವ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.
(ಈ)	ವಿಶೇಷ ನ್ಯಾಯಾಲಯ ನೀಡಿದ ಶಿಕ್ಷೆ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಮಾಡಿಕೊಂಡು ಜಾಮೀನು ಪಡೆದುಕೊಂಡ ಮಾತ್ರಕ್ಕೆ ಅಂತಹ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ಸೇವೆಯಲ್ಲಿ ಮುಂದುವರೆಸಲು ಕಾನೂನಿನಲ್ಲಿ ಅವಕಾಶ ಇದೆಯೇ: ಇದ್ದರೆ, ಅಂತಹ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ವಿವರ ಜಿಲ್ಲಾವಾರು ಒದಗಿಸುವುದು?	ಇಲ್ಲ

ಆಇ 14 ವಾತೆತ 2021 (ಇ-ಆಫೀಸ್)

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಅನುಬಂಧ-1

ಲೋಕಾಯುಕ್ತ ಟ್ರಾಪ್‌ಗೆ ಒಳಗಾಗಿ ವಿಶೇಷ ನ್ಯಾಯಾಲಯಗಳಲ್ಲಿ ಶಿಕ್ಷೆಗೆ ಒಳಗಾದ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳ ವಿವರಗಳು:

ಕ್ರ.ಸಂ.	ಅಧಿಕಾರಿಯ ಹೆಸರು, ಹುದ್ದೆಗಳ ವಿವರಗಳು	ಅವಧಿ	ಜಿಲ್ಲಾವಾರು ಮಾಹಿತಿ
01	ಶ್ರೀ ಹೆಚ್.ಪಿ. ವೆಂಕಟೇಶ್, ವಾಣಿಜ್ಯ ತೆರಿಗೆ ಅಧಿಕಾರಿ	2007–08	ಬೆಂಗಳೂರು ನಗರ
02	ಆರ್ ಉಷಾಬಾಯಿ, ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ	2008–09	ಬೆಂಗಳೂರು ನಗರ
03	ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ	2008–09	ದಕ್ಷಿಣ ಕನ್ನಡ ಜಿಲ್ಲೆ
04	ಎಸ್.ಎಫ್. ಬೆನಕನವಾರಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು	2008–09	ಹಾವೇರಿ ಜಿಲ್ಲೆ
05	ಶ್ರೀ ಎಸ್.ಎನ್. ಸೋಮನಾಳ್, ನಿವೃತ್ತ ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು	2012–13	ಬೆಳಗಾವಿ ಜಿಲ್ಲೆ
06	ಶ್ರೀ ಡಾಕ್ಯಾ ನಾಯಕ್, ನಿವೃತ್ತ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು	2014–15	ಬೆಂಗಳೂರು ನಗರ

ಲೋಕಾಯುಕ್ತ ಟ್ರಾಪ್‌ಗೆ ಒಳಗಾಗಿ ವಿಶೇಷ ನ್ಯಾಯಾಲಯಗಳಲ್ಲಿ ಶಿಕ್ಷೆಗೆ ಒಳಗಾದ ವಾಣಿಜ್ಯ ತೆರಿಗೆ ಇಲಾಖೆಯ ಸಿಬ್ಬಂದಿಗಳ ವಿವರಗಳು:

ಕ್ರ.ಸಂ.	ಸಿಬ್ಬಂದಿಗಳ ಹೆಸರು, ಹುದ್ದೆಗಳ ವಿವರಗಳು	ಅವಧಿ	ಜಿಲ್ಲಾವಾರು ಮಾಹಿತಿ
01	ಎಂ.ಎಂ. ಗಣೇಶಪ್ಪ, ವಾಣಿಜ್ಯ ತೆರಿಗೆ ಪರಿವೀಕ್ಷಕರು,	2007–08	ಬೆಂಗಳೂರು ನಗರ
02	ಹೆಚ್.ಆರ್. ಲೋಕೇಶ್, ವಾಣಜ್ಯ ತೆರಿಗೆ ಪರಿವೀಕ್ಷಕರು	2008–09	ಹಾವೇರಿ ಜಿಲ್ಲೆ
03	ಬಿ.ಪಿ. ಮಮತ, ವಾಣಿಜ್ಯ ತೆರಿಗೆ ಪರಿವೀಕ್ಷಕರು	2012–13	ಮೈಸೂರು ಜಿಲ್ಲೆ
04	ವೈ.ಬಿ. ರೆಡ್ಡೇರ, ವಾಣಿಜ್ಯ ತೆರಿಗೆ ಪರಿವೀಕ್ಷಕರು	2012–13	ಬೆಳಗಾವಿ ಜಿಲ್ಲೆ
05	ಡಿ.ಎಂ. ಮಲ್ಲಿಕಾರ್ಜುನ ಸ್ವಾಮಿ ದ್ವಿತೀಯ ದರ್ಜೆ ಸಹಾಯಕ	2014–15	ಕೊಡಗು ಜಿಲ್ಲೆ
06	ಭಗವಾನ್, ನಿವೃತ್ತ ಡಿ–ದರ್ಜೆ ನೌಕರರು,	2014–15	ಕೊಡಗು ಜಿಲ್ಲೆ

ಅನುಬಂಧ-2

ವಿಶೇಷ ನ್ಯಾಯಾಲಯಗಳಿಂದ ಶಿಕ್ಷೆಗೆ ಗುರಿಯಾದ ಅಧಿಕಾರಿ ವರ್ಗದವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿ ಜಾಮೀನು ಪಡೆದು ಸೇವೆಯಲ್ಲಿ ಮುಂದುವರೆದಿರುವವರ ವಿವರಗಳು:

ಕ್ರಸಂ.	ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಹೆಸರು	ಹುದ್ದೆಯ ವಿವರ	ಜಿಲ್ಲೆ
1	ಬಿ.ಪಿ. ಮಮತ	ವಾಣಿಜ್ಯ ತೆರಿಗೆ ಪರಿವೀಕ್ಷಕರು	ಮೈಸೂರು ಜಿಲ್ಲೆ
2	ಡಿ.ಎಂ. ಮಲ್ಲಿಕಾರ್ಜುನ ಸ್ವಾಮಿ	ದ್ವಿತೀಯ ದರ್ಜೆ ಸಹಾಯಕರು	ಕೊಡಗು ಜಿಲ್ಲೆ
3	ಹೆಚ್.ಆರ್. ಲೋಕೇಶ್	ವಾಣಿಜ್ಯ ತೆರಿಗೆ ಪರಿವೀಕ್ಷಕರು	ಹಾವೇರಿ ಜಿಲ್ಲೆ
4	ವೈ.ಬಿ.ರೆಡ್ಡೇರ	ವಾಣಿಜ್ಯ ತೆರಿಗೆ ಪರಿವೀಕ್ಷಕರು	ಬೆಳಗಾವಿ ಜಿಲ್ಲೆ

(ಎಂ.ರಾಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ(ವಾ.ತೆ-2 & ಸಮನ್ವಯ)